RAMAIAH UNIVERSITY OF APPLIED SCIENCES | Faculty of Dental Sciences

## ನಮ್ಮ ತಜ್ಞರು



**ಡಾ. ಸೌಮ್ಯ ಎಸ್.ವಿ.**
**ಎಂ.ಡಿ.ಎಸ್., ಪಿಎಚ್.ಡಿ.**
**ಪ್ರಾಧ್ಯಾಪಕರು ಹಾಗೂ**
**ವಿಭಾಗದ ಮುಖ್ಯಸ್ಥರು**



**ಡಾ. ರೂಪಾ ಎಸ್.**
**ರಾವ್, ಎಂ.ಡಿ.ಎಸ್.**
**ಪ್ರಾಧ್ಯಾಪಕರು**



**ಡಾ. ಡೊಮಿನಿಕ್ ಆಗಸ್ಟಿನ್,**
**ಎಂ.ಡಿ.ಎಸ್., ಪಿಎಚ್.ಡಿ.**
**ಸಹ ಪ್ರಾಧ್ಯಾಪಕರು**



**ಡಾ. ಸುರೇಂದ್ರ ಎಲ್.,**
**ಎಂ.ಡಿ.ಎಸ್.**
**ಸಹಾಯಕ**
**ಪ್ರಾಧ್ಯಾಪಕರು**



**ಡಾ. ಹಜೀರಾ**
**ಖಾತೂನ್, ಎಂ.ಡಿ.ಎಸ್.**
**ಸಹಾಯಕ**
**ಪ್ರಾಧ್ಯಾಪಕರು**




**ದಂತ ವಿಜ್ಞಾನಗಳ ವಿಭಾಗ, ಎಂ. ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ, ನ್ಯೂ ಬಿಇಎಲ್ ರಸ್ತೆ, ಎಂ.ಎಸ್.ಆರ್. ನಗರ, ಬೆಂಗಳೂರು – 560054**

***www.msruas.ac.in***
***oralpathramaiah@gmail.com,op.ds@msruas.ac.in***
**080 4536 6688 Ext: 234**


ನಮ್ಮ ಆದ್ಯತೆ
ನಿಖರವಾದ ರೋಗನಿರ್ಣಯ
ಉನ್ನತ ಪ್ರಯೋಗಾಲಯ ತಂತ್ರಗಳು
ಸಂಶೋಧನೆ ಮತ್ತು ನವೀನತೆ
ಗುಣಮಟ್ಟದ ರೋಗನಿರ್ಣಯ ಸೇವೆಗಳು
ಬಾಯಿ ರೋಗಗಳ ಆರಂಭಿಕ ಪತ್ತೆ
ಬಾಯಿಯ ರೋಗ ವಿಜ್ಞಾನದ ಶಿಕ್ಷಣದಲ್ಲಿ ಶ್ರೇಷ್ಠತೆ





# ಬಾಯಿ, ಮುಖ ಮತ್ತು ಡವಡೆಯ ರೋಗ ಲಕ್ಷಣ ಹಾಗೂ ಸೂಕ್ಷ್ಮ ಜೀವವಿಜ್ಞಾನ ವಿಭಾಗ



**ದಂತ ವಿಜ್ಞಾನಗಳ ವಿಭಾಗ, ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ**

## ಅಂತಿಮ ರೋಗ ನಿರ್ಣಯದ ಸಹಾಯಕರು

ಬಾಯಿ, ಮುಖ ಮತ್ತು ಡವಡೆಯ ರೋಗ ಲಕ್ಷ್ಮಣ ಹಾಗೂ ಸೂಕ್ಷ್ಮಜೀವವಿಜ್ಞಾನ ವಿಭಾಗವನ್ನು 1992ರಲ್ಲಿ ಸ್ಥಾಪಿಸಲಾಯಿತು. ಈ ವಿಭಾಗವುಪೂರ್ವಸ್ನಾತಕ, ಸ್ನಾತಕೋತ್ತರ, ಮತ್ತು ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶೈಕ್ಷಣಿಕ ತರಬೇತಿಯನ್ನು ಒದಗಿಸುತ್ತದೆ. ಇದು ಅತ್ಯುತ್ತಮ ರೋಗಿ ಆರೈಕೆಯನ್ನು ನೀಡುತ್ತಿದ್ದು, ವಿವಿಧ ರೀತಿಯ ಸೇವೆಗಳನ್ನು ಒದಗಿಸುತ್ತದೆ. ಈ ವಿಭಾಗವು ನಿಯಮಿತ ರಕ್ತ ಪರೀಕ್ಷೆಗಳು, ಬಯಾಪ್ಸಿ ವರದಿಗಳು ಹಾಗೂ ಕೆಲವು ಉನ್ನತ ಮಟ್ಟದ ರೋಗನಿರ್ಣಯ ಸಹಾಯಗಳಂತಹ ಪ್ರಯೋಗಾಲಯ ಸೌಲಭ್ಯಗಳನ್ನು ಒದಗಿಸುವ ಮೂಲಕ ದಂತ ವೈದ್ಯಶಾಸ್ತ್ರದ ಇತರ 8 ವಿಶೇಷತೆಗಳಿಗೆ ಸಹಕಾರ ನೀಡುತ್ತದೆ. ಇದರಿಂದ ಬಾಯಿ, ಮುಖ ಮತ್ತು ಡವಡೆಯ ಪ್ರದೇಶದಲ್ಲಿನ ವಿವಿಧ ಅಸಾಮಾನ್ಯತೆಗಳ ನಿಖರ ನಿರ್ಣಯ ಸಾಧ್ಯವಾಗುತ್ತದೆ. ಈ ವಿಭಾಗವು ಅತ್ಯಂತ ಉತ್ಸಾಹಭರಿತ ಮತ್ತು ಸಂಶೋಧನಾ ಮನೋಭಾವ ಹೊಂದಿರುವ ಸಿಬ್ಬಂದಿಗಾಗಿ ಪ್ರಸಿದ್ಧವಾಗಿದ್ದು, ಅವರು ಅನುವಾದಾತ್ಮಕ (ಟ್ರಾನ್ಸ್‌ಲೇಷನಲ್) ಮೌಲ್ಯದ ಉತ್ತಮ ಸಂಶೋಧನಾ ಯೋಜನೆಗಳನ್ನು ಕೈಗೊಂಡಿದ್ದಾರೆ. ಈ ವಿಭಾಗದಲ್ಲಿ ಬಾಯಿಯ ಕ್ಯಾನ್ಸರ್ ಮತ್ತು ಸಂಶೋಧನಾ ಕೇಂದ್ರ ಕೂಡ ಇದ್ದು, ಇದು ಬಾಯಿ ಕ್ಯಾನ್ಸರ್ ನಲ್ಲಿ ಬಹುವಿಷಯಕ ಚಿಕಿತ್ಸಾ ಮತ್ತು ಅನ್ವಯಿತ

# ನಮ್ಮ ಸೇವೆಗಳು

**ಜೀವಕಣಗಳನ್ನು ದೇಹದಿಂದ**

**ಬೇರ್ಪಡಿಸಿ ರೋಗ ಪತ್ತೆ ಮಾಡುವುದು - ಬೈಯಾಪ್ಸಿ ವರದಿ**
**ಜೀವಕೋಶದ ರೋಗಶಾಸ್ತ್ರ ಅಧ್ಯಯನದ ವರದಿ**

ಉನ್ನತ ಸೂಕ್ಷ್ಮದರ್ಶಕ ತಂತ್ರಜ್ಞಾನಗಳು

- ಪ್ರಕಾಶಮಾನವಾದ ಸೂಕ್ಷ್ಮದರ್ಶಕ
- ಕತ್ತಲೆಯ ಸೂಕ್ಷ್ಮದರ್ಶಕ
- ಚಿತ್ರ ವಿಭೇದನ ಶಕ್ತಿ (ರೆಸಲ್ಯೂಶನ್) ಸೂಕ್ಷ್ಮದರ್ಶಕ
- ಚಿತ್ರ ವಿಶ್ಲೇಷಣೆ ಮೃದುತಂತ್ರಾಂಶ(ಸಾಫ್ಟ್‌ವೇರ್)
- ಧ್ರುವೀಕರಿಸುವ (ಪೋಲರೈಸಿಂಗ್)ಸೂಕ್ಷ್ಮದರ್ಶಕ
- ಹಂತ ವ್ಯತ್ಯಾಸ (ಫೇಸ್ ಕಾಂಟ್ರಾಸ್ಟ್) ಸೂಕ್ಷ್ಮದರ್ಶಕ

**ಗಟ್ಟಿ ಹಾಗೂ ಮೃದು ಕಣಜಗಳ ವಿಶೇಷ ಬಣ್ಣಿಸುವಿಕೆ**
**-80°C ಆಳವಾದ ಶೀತಲಕರಣ ಯಂತ್ರ (ಡೀಪ್ ಫ್ರೀಜರ್)**
**ಸಂಶೋಧನಾ ಸೂಕ್ಷ್ಮದರ್ಶಕ**



**ತ್ರಿಮಿತೀಯ ಸೂಕ್ಷ್ಮದರ್ಶಕ**



**ರೋಗನಿರೋಧಕ ಕಣಜ ಅಧ್ಯಯನ ರಸಾಯನಶಾಸ್ತ್ರ**



## ರಕ್ತಕಣಗಳ ಪರೀಕ್ಷೆಗಳು

ರಕ್ತ ಸಕ್ಕರೆ ಮಟ್ಟ
ರಕ್ತ ಹರಿಯುವ ಸಮಯ
ರಕ್ತ ಹೆಪ್ಪುಗಟ್ಟುವ ಸಮಯ
ಹೀಮೋಗ್ಲೋಬಿನ್ ಅಂದಾಜು
ಒಟ್ಟು ಬಿಳಿ ರಕ್ತಕಣಗಳ ಸಂಖ್ಯೆ
ಬಿಳಿ ರಕ್ತಕಣಗಳ ವ್ಯತ್ಯಾಸದ ಸಂಖ್ಯೆ
ಕೆಂಪು ರಕ್ತಕಣಗಳ ಸಂಖ್ಯೆ
ಪ್ಲೇಟ್ಲೆಟ್ ಸಮೃದ್ಧ ಪ್ಲಾಸ್ಮಾ
ರಕ್ತ ಗುಂಪು ನಿರ್ಧಾರ ಮತ್ತು ಆರ್ ಎಚ್ ಟೈಪಿಂಗ್



**ಮೃದು ಕಣಜ ಸೂಕ್ಷ್ಮ ಕತ್ತರಿಕೆ ತಂತ್ರ**



## ಬಾಯಿ ಕ್ಯಾನ್ಸರ್ ಮತ್ತು ಸಂಶೋಧನಾ ಕೇಂದ್ರ (ಒ ಸಿ ಆರ್ ಸಿ)



2015ರಲ್ಲಿ ಸ್ಥಾಪನೆಯಾದ ನಂತರದಿಂದ, ಒ ಸಿ ಆರ್ ಸಿ ಬಾಯಿ ಕ್ಯಾನ್ಸರ್ ಮತ್ತು ಪೂರ್ವ ಕ್ಯಾನ್ಸರ್ ಕ್ಷೇತ್ರದಲ್ಲಿ ಸಂಶೋಧನೆಯನ್ನು ವೇಗಗೊಳಿಸಿದೆ. ಈ ಕೇಂದ್ರದಲ್ಲಿ ಬಾಯಿ ರೋಗ ತಜ್ಞರುಗಳು ಉತ್ಪತ್ತಿ (ಪ್ಯಾಥೋಜೆನೆಸಿಸ್) ಮತ್ತು ಅಣುಮಟ್ಟದ ರೋಗ ನಿರ್ಣಯ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ತಂಡವು ಬಹುವಿಷಯಕ (ಮಲ್ಟಿಡಿಸಿಪ್ಲಿನರಿ) ವಿಧಾನವನ್ನು ಅನುಸರಿಸಿ, ಉನ್ನತ ಗುಣಮಟ್ಟದ ಸಂಶೋಧನಾ ಫಲಿತಾಂಶಗಳನ್ನು ನೀಡುವ ಅನುವಾದಾತ್ಮಕ ಕ್ಯಾನ್ಸರ್ ಸಂಶೋಧನಾ ವೇದಿಕೆಯನ್ನು ಸ್ಥಾಪಿಸುವತ್ತ ಗಮನ ಹರಿಸಿದೆ. ಕಾರ್ಯವನ್ನು ಬಾಯಿ, ಮುಖ ಮತ್ತು ದವಡೆಯ ಸರ್ಜರಿ, ಬಾಯಿಯ ಔಷಧ ಚಿಕಿತ್ಸೆ ಮತ್ತು ಕ್ಷ-ಕಿರಣ, ಸಾರ್ವಜನಿಕ ಆರೋಗ್ಯ ದಂತವೈದ್ಯಶಾಸ್ತ್ರ ಮತ್ತು ಜೀವ ವಿಜ್ಞಾನಗಳ ವಿಭಾಗಗಳೊಂದಿಗೆ ಸಹಯೋಗದಲ್ಲಿ ಸಂಯೋಜಿಸಲಾಗಿದ್ದು, ಶಸ್ತ್ರಚಿಕಿತ್ಸಾ ನಿರ್ವಹಣೆ ಹಾಗೂ ಚಿಕಿತ್ಸಾ ವಿಧಾನಗಳ ಮೇಲೆ ಕೇಂದ್ರೀಕರಿಸಲಾಗಿದೆ.

### ಒ ಸಿ ಆರ್ ಸಿ ಯ ವಿಭಾಗಗಳು

**ಉತ್ಕೃಷ್ಟತಾ ಕೇಂದ್ರ – ಕ್ಯಾನ್ಸರ್ ಜೈವ ಸಂಗ್ರಹಾಲಯ**



**ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಅಧ್ಯಯನದ ಏಕೀಕರಣ**




**ಉನ್ನತ ಅಣುಮಟ್ಟದ ಮತ್ತು ರೋಗನಿರ್ಣಯ ಸಂಶೋಧನೆ**

